"ನನ್ನನ್ನು ಏನು ಮಾಡೂಂತೀಯಾ?"

"ಪಟ್ಟದ ರಾಣಿ ಎಂದು ನನ್ನನ್ನೂ ಸ್ವೀಕರಿಸಲು ಸಾಧ್ಯವೇ?"

ಅಪ್ಪಾಜಿರಾಜ ಕಾವೇರಿಯನ್ನು ತನ್ನ ಬಾಹುಗಳಿಂದ ಬಿಡುಗಡೆಗೊಳಿಸಿದ. ಪಟ್ಟದ ರಾಣಿ ನೀಲಾಂಬಿಕಾ ದೇವಿ ಜೀವಂತವಾಗಿದ್ದಾಳೆ. ಅವಳಿಗೆ ಒಬ್ಬ ಮಗನಿದ್ದಾನೆ. ಅವನು ಸಿಂಹಾಸನಕ್ಕೆ ಉತ್ತರಾಧಿಕಾರಿ. ಕಾವೇರಿಯನ್ನು ಅಪ್ಪಾಜಿ ರಾಜನೇನು ಶಾಸ್ತ್ರೋಕ್ತವಾಗಿ ವಿವಾಹವಾಗಿರಲಿಲ್ಲ. ಈಗ ಯಾವ ಕಾರಣ ನೀಡಿ ಇನ್ನೊಬ್ಬಳನ್ನು ಪಟ್ಟದ ರಾಣಿಯನ್ನಾಗಿ ಮಾಡುವುದು? ಸಂಪ್ರದಾಯಕ್ಕೆ ವಿರುದ್ಧವಾದುದನ್ನು ಯಾರೂ ಒಪ್ಪುವುದಿಲ್ಲ. ಅವನ ಮೌನಕ್ಕೆ ಅವಳು ಕಣ್ಣೀರು ಸುರಿಸಿದಳು.

"ನನಗೆ ಪಟ್ಟದ ರಾಣಿಯ ಯಾವ ಅಧಿಕಾರವೂ ಬೇಡ. ದೊಡ್ಡ ವೀರಪ್ಪ ದೊರೆಗಳ ಬಳಿಕ ನೀವು ಸಿಂಹಾಸನವೇರುವಾಗ ಪಕ್ಕದಲ್ಲಿ ನೀಲಾಂಬಿಕಾ ದೇವಿಯೇ ಆಸೀನಳಾಗಲಿ. ನನಗೆ ಅರಮನೆಯ ಅಧಿಕಾರದ ವ್ಯಾಮೋಹವಿಲ್ಲ. ಚಿನ್ನಾಭರಣಗಳ ಮೋಹವೂ ಇಲ್ಲ. ಅಪ್ಪಾಜಿರಾಯರು ಇಟ್ಟುಕೊಂಡವಳು ಎಂಬ ಪಟ್ಟ ಹೋಗಬೇಕಾಗಿದೆ. ನಾನು ನಿಮ್ಮ ಪಟ್ಟದ ರಾಣಿಯಾದರೆ ಮಾತ್ರ ಅದು ಸಾಧ್ಯ. ಒಮ್ಮೆ ಅರಮನೆ ಸೇರಿದ ಮೇಲೆ ನಿಮ್ಮೆಲ್ಲರ ಸೇವೆ ಮಾಡಿಕೊಂಡು ಜೀವನಕ್ಕೆ ಹೊಸ ಅರ್ಥವನ್ನು ಕಂಡುಕೊಳ್ಳುತ್ತೇನೆ. ಪ್ರಭುಗಳು ಇಲ್ಲವೆನ್ನಬಾರದು."

ಅಪ್ಪಾಜಿರಾಜ ತನ್ನ ಹೆಗಲ ಉತ್ತರೀಯದಿಂದ ಕಾವೇರಿಯ ಕಣ್ಣ ನೀರನ್ನು ತೊಡೆದ. ಅವಳ ಬೇಡಿಕೆ ತಪ್ಪೆಂದು ಅವನಿಗೆ ಅನ್ನಿಸಲಿಲ್ಲ. ಆದರೆ ಕಾರ್ಯಸಾಧ್ಯವೇ? ಯೋಚಿಸಿ ಯೋಚಿಸಿ ಅವನೊಂದು ತೀರ್ಮಾನಕ್ಕೆ ಬಂದ. ಮೊದಲು ನೀಲಾಂಬಿಕಾ ದೇವಿಯನ್ನು ಒಪ್ಪಿಸಬೇಕು. ಅವಳಿಂದ ದೊಡ್ಡವೀರಪ್ಪ ದೊರೆಗಳಿಗೆ ವಿಷಯ ಮನವರಿಕೆ ಮಾಡಿಸಬೇಕು. ಸೊಸೆಯನ್ನು ಅಕ್ಕಮಹಾದೇವಿಯ ಅವತಾರವೆಂದು ಭಾವಿಸಿ ಗೌರವಿಸುವ ಮಹಾರಾಜರು ಒಪ್ಪದೆ ಇರಲಾರರು. ಅಪ್ಪಾಜಿ ರಾಜ ಕಾವೇರಿಯ ಕೈಯನ್ನು ಪ್ರೀತಿಯಿಂದ ಅದುಮಿದ.

ಆ ರಾತ್ರಿ ಎಂದಿನಂತೆ ನೀಲಾಂಬಿಕಾದೇವಿ ತಡವಾಗಿ ಅಂತಃಪುರಕ್ಕೆ ಬಂದಳು. ಅವಳು ಬರುವಾಗ ಗಾಢ ನಿದ್ರೆಯಲ್ಲಿರುತ್ತಿದ್ದ ಅಪ್ಪಾಜಿರಾಜ ಅಂದು ನಿದ್ದೆ ಬಾರದೆ ಹೊರಳಾಡುತ್ತಿರುವುದು ಅವಳ ಗಮನಕ್ಕೆ ಬಂತು.

"ಮಹಾರಾಜರು ನೆಮ್ಮದಿಯಿಂದ ರಾಜ್ಯಭಾರ ಮಾಡುತ್ತಿದ್ದಾರೆ. ಯುವರಾಜರು ನಿದ್ದೆಯಿಲ್ಲದೆ ಹೊರಳುವುದೇಕೊ?"

ಅಪ್ಪಾಜಿರಾಜ ಎದ್ದು ಕುಳಿತ.

"ನೀಲಾಂಬಿಕೆ, ಒಂದು ವಿಷಯ ನನ್ನ ಕೊರೆಯುತ್ತಿದೆ. ಅದರ ಪರಿಹಾರ ನಿನ್ನಿಂದ ಮಾತ್ರ ಸಾಧ್ಯ. ಹೇಳಿಕೊಳ್ಳಬಹುದಾ?"

"ಹೇಳಿ. ಪರಿಹರಿಸಲು ಸಾಧ್ಯವಾ ನೋಡೋಣ."

ಅಪ್ಪಾಜಿರಾಜ ಇಳಿದನಿಯಲ್ಲೆಂದ. "ಅದು ಕಾವೇರಿಗೆ ಸಂಬಂಧಿಸಿದ್ದು. ಅವಳು ನನಗೆ ನಿಷ್ಠಳಾಗಿ ಇದುವರೆಗೆ ಬಾಳಿದವಳು. ಮಹಾದೇವ ಕಣ್ಣು ತೆರೆದು ಅವಳಿಗೆ ಪ್ರಸಾದ ಕರುಣಿಸಲಿಲ್ಲ. ಅವಳನ್ನು ನಾಳಿನ ಚಿಂತೆ ಕಾಡುತ್ತಿದೆ. ಅವಳಲ್ಲಿ ಅಭದ್ರತೆಯ ಭಾವ ಮೂಡಿದೆ."

"ಅದಕ್ಕೆ ನೀವೇನು ಮಾಡಬೇಕಂತೆ?"

"ಅವಳನ್ನು ಪಟ್ಟದ ರಾಣಿಯನ್ನಾಗಿ ಮಾಡಬೇಕಂತೆ. ಇಟ್ಟುಕೊಂಡವಳು ಎಂಬ ಹೆಸರನ್ನು ತಪ್ಪಿಸಬೇಕಂತೆ. ಈಗ ಏನು ಮಾಡೋಣ?"

"ನೀವೇನು ಹೇಳಿದಿರಿ?"